# ವಕ್ರರೇಖೆಗಳ ಜೀವನಪಥ್ಯಗಳು

ಕಾರ್ಟೂನ್‌ಗಳನ್ನು ನೋಡುವುದರಿಂದ ಮಕ್ಕಳ ಕಲ್ಪನಾಶಕ್ತಿ ಗರಿಗೆದರುತ್ತದೆ. ಜೀವನಪಾಠಗಳೂ ವಕ್ರರೇಖೆಗಳಲ್ಲಿ ದೊರೆಯಬಹುದು.



■ ಸ್ವಯಂಪ್ರಭಾ

ಕಾರ್ಟೂನುಗಳೆಂದರೆ ಮಕ್ಕಳಿಗೆ ಇಷ್ಟ. ಅವರ ಮೆಚ್ಚಿನ ಕಾರ್ಟೂನು ಪಾತ್ರಗಳ ಬಳಗ ಬಹು ದೊಡ್ಡದಿದೆ. ಅಲ್ಲಿ ಬರುವ ಕಾಲ್ಪನಿಕ ಪಾತ್ರಗಳು, ಮಕ್ಕಳ ಬದುಕಿನ ಕತೆಗಳನ್ನೇ ಹೇಳುತ್ತವೆ. ಹೋಮ್ ವರ್ಕ್ ಮಾಡುವ ತಲೆನೋವು, ಸದಾ ಬೈಗುಳದ ಮಳೆ ಸುರಿಸುವ ಅಮ್ಮ, ಪ್ರೀತಿಯ ಮಹಾಪೂರವನ್ನೇ ಹರಿಸುವ ಸ್ನೇಹಿತನ ಅಮ್ಮ, ಮನೆಯಲ್ಲೊಂದು ಬೆಕ್ಕು, ಅಂಗಳದಲ್ಲಿರುವ ಮರದ ಮೇಲೆ ಪ್ರತಿದಿನ ಬಂದು ಮಾತನಾಡುವ ಹಕ್ಕಿ, ಮಕ್ಕಳು ಆಟವಾಡುತ್ತ, ಓಡುತ್ತಿದ್ದರೆ ಅವರೊಡನೆ ತಾನೂ ಓಡುತ್ತ ಸಾಗುವ ನಾಯಿ ಇಂತಹ ಪ್ರೀತಿಯ ಲೋಕದ ಕಥೆಗಳೆಲ್ಲ ಅಲ್ಲಿ ಕಾಣಿಸಿಕೊಳ್ಳುತ್ತವೆ. ಹಾಗಾಗಿ, ಕಾರ್ಟೂನು ಪಾತ್ರಗಳೆಲ್ಲ ತಮ್ಮದೇ ಸಮಸ್ಯೆಯಲ್ಲಿ ಮುಳುಗಿವೆಯಲ್ಲ, ತಮ್ಮದೆ ಖುಷಿಯನ್ನು ಅನುಭವಿಸುತ್ತಿವೆಯಲ್ಲ ಎಂದು ಮಕ್ಕಳು ಯೋಚಿಸುತ್ತಾರೆ. ತಲ್ಲೀನರಾಗಿ ಕಾರ್ಟೂನು ಸರಣಿಗಳನ್ನು ನೋಡುತ್ತಾರೆ.

ಸಮಯ ಹಾಳು ಮಾಡುವ ಕತೆಗಳೆಂದು ಕಾರ್ಟೂನ್ ಕಥೆಗಳನ್ನು ದೊಡ್ಡವರು ಮೂಗು ಮುರಿಯುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ, ದೊಡ್ಡವರ ಕಥೆಗಳಿಗಿಂತ ಕಾರ್ಟೂನ್ ಕಥೆಗಳೇ ಚೆನ್ನಾಗಿರುತ್ತವೆ. ಅವು ಮಕ್ಕಳ ಕಥೆಗಳ ಮತ್ತೊಂದು ರೂಪವಾಗಿರುತ್ತವೆ. ದೊಡ್ಡವರು ನೋಡುವ ಧಾರಾವಾಹಿಯ ಕಥೆಗಳಿಗಿಂತ ಕಾರ್ಟೂನು ಕಥೆಗಳು ಹೆಚ್ಚು ಸಂಯಮದಿಂದ ಕೂಡಿರುತ್ತವೆ. ಡೊರೆಮನ್, ನಿಂಜಾಹಟೋರಿ, ಡಿಸ್ನಿಯ ಮಿಕ್ಕಿ ಮೌಸ್, ಟಾಮ್ ಅಂಡ್ ಜೆರ್ರಿ, ಪೆಪ್ಪಾಪಿಗ್, ಮೋಟು ಪತ್ಲು, ಲ್ಯಾರಿ ದ ಕ್ಯುಕಂಬರ್, ಏಂಜಲಿಕಾ ಪಿಕ್ಕಲ್ಸ್‌ನ ಪಾತ್ರಗಳು, ಫೆಲಿಕ್ಸ್ ದ ಕ್ಯಾಟ್, ಲ್ಯೂನಿ ಟ್ಯೂನ್ಸ್‌ನ ಡಾಫಿ ಡಕ್, ಬಗ್ಸ್ ಬನ್ನೀ... ಅಬ್ಬಬ್ಬಾ... ಈ ಲೋಕದ ಆಳ ಅಗಲ ಅಷ್ಟಿಷ್ಟಲ್ಲ.



ನಿಂಜಾ ಹಟೋರಿ ಮತ್ತು ಸ್ನೇಹಿತರಿಗೆ ಒಮ್ಮೆ ಒಂದು ಚಿಟ್ಟೆಯ ಕೋಶ ಸಿಗುತ್ತದೆ. ಅದು ಪುಟ್ಟದೊಂದು ಗಿಡದಲ್ಲಿ ಅಂಟಿಕೊಂಡಿತ್ತು. ಅವರ ತರಗತಿಯ ಮೇಷ್ಟರಿಗೋ ಚಿಟ್ಟೆಗಳೆಂದರೆ ಮೋಹ. ಜಗತ್ತಿನ ವಿವಿಧ ಚಿಟ್ಟೆಗಳ ಬಗ್ಗೆ ಅಧ್ಯಯನ ಮಾಡುತ್ತ, ಪ್ರಯೋಗಾಲಯದಲ್ಲಿ ಅದರ ಮಾದರಿಗಳನ್ನು ಸಂಗ್ರಹಿಸುತ್ತ, ಚಿಟ್ಟೆಗಳ ಗುಂಗಿನಲ್ಲಿಯೇ ಮುಳುಗಿರುವ ಮೇಷ್ಟರವರು. ಈ ಕೋಶವು ಅಂಟಿರುವ ಗಿಡವನ್ನು, ಚಿಟ್ಟೆಯನ್ನು ಪ್ರೀತಿಸುವ ಅವರ ಮೇಷ್ಟರಿಗೆ ಕೊಡಲು ಮಕ್ಕಳು ನಿರ್ಧರಿಸಿದರು. ಮೇಷ್ಟರಿಗೆ ಭಾರೀ ಖುಷಿ ಆಯಿತು. ಅವರು ಅದರ ಪೂರ್ವಾಪರಗಳನ್ನೆಲ್ಲ ಹುಡುಕಿ, ಓದಿ ತಿಳಿದುಕೊಂಡು, ಕೋಶವಿರುವ ಗಿಡವನ್ನು ಗಾಜಿನ ಜಾರ್ ಒಳಗೆ ಹಾಕಿಟ್ಟರು. ತರಗತಿಗೆ ಅದನ್ನು ತಂದು ಟೇಬಲ್ ಮೇಲೆ ಇರಿಸಿ, ಕೋಶವು ಒಡೆದು ಯಾವಾಗ ಚಿಟ್ಟೆಯಾಗುವುದೋ ಎಂದು ಕಾಯಲು ಶುರು ಮಾಡಿದರು. ಪಾಠ ಮಾಡುವ ಕುರಿತು ಗಮನವೇ ಇಲ್ಲದ ಈ ಮೇಷ್ಟರನ್ನು ನೋಡಿ ಮಕ್ಕಳೂ ನಕ್ಕರು. ತರಗತಿಯಲ್ಲಿ ಅವರು ಓದಿದ್ದನ್ನೇ ಓದಿ, ಮಾತನಾಡಿದ್ದನ್ನೇ ಆಡಿ, ಬೇಸರ ಪಟ್ಟುಕೊಳ್ಳುತ್ತಾ ಇರುವಾಗ ಸಂಜೆಯಾಯಿತು. ವಿದ್ಯಾರ್ಥಿಯೊಬ್ಬ ಈ ಕೋಶವನ್ನು ತಾನು ನೋಡಿಕೊಳ್ಳುವುದಾಗಿ ಹೇಳಿದ. ಮೇಷ್ಟರು ಸದ್ಯಕ್ಕೆ ಮನೆಗೆ ಹೋಗಿ, ಮರಳಿ ಬರುವುದಾಗಿ ಹೇಳಿ, ಕಾಳಜಿ ಮಾತುಗಳನ್ನು ಹೇಳಿ ಅಲ್ಲಿಂದ ಹೊರಟರು.

ಪೋಕರಿ ಹುಡುಗ ಜಾರ್‌ನ ಮುಚ್ಚಳ ತೆಗೆದದ್ದರಿಂದ ಆ ಗಿಡವು ಕೆಳಗೆ ಬಿತ್ತು. ಎಲ್ಲರೂ ಸೇರಿ ಗಡಿಬಿಡಿಯಿಂದ ಅದನ್ನು ಮರಳಿ ಜಾರ್‌ನೊಳಗೆ ಇರಿಸುವಷ್ಟರಲ್ಲಿ ಮೇಷ್ಟರು ಅಲ್ಲಿಗೆ ಧಾವಿಸಿದರು. ಆ ಗಲಾಟೆಯಲ್ಲಿ ಕೋಶದೊಳಗಿಂದ ಚಿಟ್ಟೆಯು ಮೆಲ್ಲನೆ ಹೊರಬರಲು ಯತ್ನಿಸುತ್ತಿದೆ. ಮೇಷ್ಟರೋ, ಹೊಸ ಚಿಟ್ಟೆಯನ್ನು ಹಿಡಿದಿಟ್ಟುಕೊಳ್ಳಬೇಕೆಂದು ಬಯಸಿ, ಬಲೆಯ ಸಾಧನವನ್ನು ತಂದರು. ಜಾರಿನಿಂದ ತೆಗೆದ ಗಿಡವನ್ನು ಹಿಡಿದುಕೊಂಡು ಮಕ್ಕಳು ಓಡುತ್ತಿದ್ದರೆ, ಚಿಟ್ಟೆಯು ಹಾರಲು ಯತ್ನಿಸುತ್ತದೆ, ಮೇಷ್ಟರು ಅದನ್ನು ಹಿಡಿಯಲು ಬಲೆಯಂತಹ ಸಾಧನ ಹಿಡಿದು ಓಡುತ್ತಾರೆ. ಅಷ್ಟರಲ್ಲಿ ನಿಂಜಾ, ಬಲೆಯ ಸಾಧನವನ್ನು ಕತ್ತರಿಸಿಬಿಡುತ್ತಾನೆ. ಚಿಟ್ಟೆಯು ಯಾವುದೇ ಅಡೆತಡೆಯಿಲ್ಲದೆ ಬಾನಿನಲ್ಲಿ ಖುಷಿಯಿಂದ ಹಾರಾಡುತ್ತದೆ. ಇದು ಕಥೆ.

ತುಂಟ ಸ್ವಭಾವದ ಮಕ್ಕಳು ಚಿಟ್ಟೆಯು ಬಾನಿನಲ್ಲಿ ಹಾರುವುದನ್ನು ನೋಡಿ ಖುಷಿಪಡುತ್ತಾರೆ! ಆಹಾ... ರೆಕ್ಕೆಯನ್ನು ಬಡಿಯುತ್ತಾ ಹಾರುವ ಸುಖವನ್ನು ಮೊದಲ ಬಾರಿಗೆ ಅನುಭವಿಸುವ ಚಿಟ್ಟೆಯ ಖುಷಿಯೇ ಮಕ್ಕಳ ಮುಖದಲ್ಲಿಯೂ ಗೋಚರಿಸುವುದು. ಮಕ್ಕಳೆಲ್ಲ ಸೇರಿ ಮೇಷ್ಟರಿಗೆ ಪಾಠ ಮಾಡಿದಂತೆ ಇರುವ ಈ ಒಂದು ಸರಣಿಯು ಎಷ್ಟೆಲ್ಲ ಸಂದೇಶಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಚಿಟ್ಟೆಯು ಪ್ರಯೋಗಾಲಯದಲ್ಲಿ ಇರಬಾರದು, ಬಾನಿನಲ್ಲಿ ಹಾರಬೇಕು ಎಂದು ಮಕ್ಕಳಿಗೆ ಹೇಳಿಕೊಟ್ಟವರಾರು? ಖುಷಿಯು ಬಂಧನದೊಳಗಿಲ್ಲ ಎಂಬ ಅರಿವು ಮೂಡಿಸಿದವರಾರು?

ಹೀಗೆ, ಅನೇಕ ಕಾರ್ಟೂನು ಸರಣಿಗಳು ಒಳ್ಳೆಯ ಸಂದೇಶವನ್ನು ಹೊತ್ತಿರುತ್ತವೆ. ಅವುಗಳನ್ನು ನೋಡುವ ಮಕ್ಕಳಿಗೆ ಯದ್ವಾತದ್ವಾ ಬೈಯಬೇಕೆಂದಿಲ್ಲ. ಬದಲಾಗಿ, ಟೀವಿ ಅಥವಾ ಮೊಬೈಲ್‌ನಲ್ಲಿ ಆ ಸರಣಿಯನ್ನು ನೋಡುವ ಅವಧಿಯನ್ನು ನಿಗದಿಪಡಿಸಬೇಕು. ನಿರಂತರ ಸರಣಿಗಳನ್ನು ನೋಡುತ್ತಿರುವುದರಿಂದ ಸಮಸ್ಯೆ ಸೃಷ್ಟಿಯಾಗುವುದೇ ಹೊರತು, ಅದರಲ್ಲಿನ ಕಥೆಗಳು ಸಮಸ್ಯೆ ಸೃಷ್ಟಿಸುವ ಸಂಭವ ಕಡಿಮೆ.

ಪ್ರತಿಕ್ರಿಯಿಸಿ: feedback@sudha.co.in